ಕೆ.ಜಿ. ಒಂದಕ್ಕೆ ೨ರೂ.ಗಳಂತೆ ಅಕ್ಕಿ ವಿತರಣೆ ಮಾಡಿದ ಖರ್ಚಿನ ವಿವರ

೭೦೯. ಶ್ರೀ ಎನ್. ಎಂ. ಆಡ್ಯಂತಾಯ(ಸುರತ್‌ಕಲ್).— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಳೆದ ೩ವರ್ಷಗಳಲ್ಲಿ ರಾಜ್ಯ ಸರ್ಕಾರವು ೨-೦೦ ರೂ.ಗಳಿಗೆ ಕೆ.ಜಿ ಅಕ್ಕಿಯನ್ನು ಪೂರೈಸಲು ಖರ್ಚು ಮಾಡಿದ ಹಣ ಎಷ್ಟು ವಿವರ ಒದಗಿಸುವುದು.

ಆ) ಈ ಯೋಜನೆಯಿಂದ ಲಾಭ ಪಡೆದ ಜನರೆಷ್ಟು ;

ಇ) ಈ ಯೋಜನೆಗಾಗಿ ಖರ್ಚು ಮಾಡಿದ ಹಣದಲ್ಲಿ ಕೇಂದ್ರ ಸರ್ಕಾರವು ಸಬ್ಸಿಡಿ ಮತ್ತು ಇತರೆ ರೂಪದಲ್ಲಿ ನೀಡಿರುವ ಮೊತ್ತ ಎಷ್ಟು?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯಸಚಿವರು).

ಅ) ೩ ವರ್ಷಗಳಲ್ಲಿ ರಾಜ್ಯ ಸರ್ಕಾರವು ೨-೦೦ ರೂ.ಗಳಿಗೆ ಕೆ.ಜಿ. ಅಕ್ಕಿಯನ್ನು ಪೂರೈಸಲು ಮಾಡಿದ ಖರ್ಚಿನ ವಿವರ ಕೆಳಕಂಡಂತಿದೆ.

ವರ್ಷಗಳು		ಖರ್ಚು (ಕೋಟಿಗಳಲ್ಲಿ)
೧೯೮೫-೮೬		೧೫.೫೧
೧೯೮೬-೮೭		೩೦.೧೯
೧೯೮೭-೮೮ (ಡಿಸೆಂಬರ್ ೮೭ರವರೆಗೆ)		೧೪.೫೭
	ಒಟ್ಟು	೬೦.೨೭

ಆ) ೩೧.೧೩ ಲಕ್ಷ ಕುಟುಂಬಗಳು

ಇ) ಈ ಯೋಜನೆಗೆ ಭಾರತ ಸರ್ಕಾರವು ಯಾವ ರೀತಿಯಲ್ಲಿಯೂ ಸಬ್ಸಿಡಿಯನ್ನು ನೀಡುತ್ತಿಲ್ಲ.

ಬಂದೀಖಾನೆಗಳಲ್ಲಿರುವ ಖೈದಿಗಳ ಸಂಖ್ಯೆ

೭೧೮. ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಅಥಣಿ).— ಮಾನ್ಯ ಗೃಹಕಾಸು, ಬಂದೀಖಾನೆ ಮತ್ತು ಸಣ್ಣ ಉಳಿತಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಬೆಂಗಳೂರು-ಬಳ್ಳಾರಿ ಹಾಗೂ ಬೆಳಗಾಂ ನಗರದ ಬಂದೀಖಾನೆಗಳಲ್ಲಿರುವ ಖೈದಿಗಳ ಸಂಖ್ಯೆ ಎಷ್ಟು?

ಆ) ಇವರಲ್ಲಿ ಜೀವಾವಧಿ-ಅಲ್ಪಾವಧಿ ಶಿಕ್ಷೆ ಅನುಭವಿಸುತ್ತಿರುವವರೆಷ್ಟು? ಅವರುಗಳಲ್ಲಿ ಮಹಿಳೆಯರೆಷ್ಟು?

ಇ) ನ್ಯಾಯಾಲಯದ ವಿಚಾರಣೆಗೊಳಗಾಗಿ ಸೆರೆಮನೆಯಲ್ಲಿರುವವರೆಷ್ಟು ಮಂದಿ ಹಾಗೂ ಇವರಲ್ಲಿ ೬ ತಿಂಗಳುಗಳಿಂದ ೧ ವರ್ಷ ವಿಚಾರಣೆ ಅವಧಿಯಲ್ಲಿ ಸೆರೆಮನೆ ವಾಸ ಅನುಭವಿಸುತ್ತಿರುವ ಖೈದಿಗಳ ಸಂಖ್ಯೆ ಎಷ್ಟು? ವಿಚಾರಣಾ ಕಾಲದಲ್ಲಿ ಸೆರೆಮನೆ ವಾಸದಲ್ಲಿರಿಸಲು ಕಾಲಾವಧಿ ಏನಾದರೂ ಇದೆಯೇ?